**PW_10**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ.2350/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಟಿ ಸಣ್ಣಪ್ಪ | PW:10 |
| ತಂದೆ ಹೆಸರು | - | ಲೇಟ್ ತಿಪ್ಪಯ್ಯ | CW:32 |
| ವಯಸ್ಸು | - | 69 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ನಿವೃತ್ತ ಪೊಲೀಸ್ ಸಹಾಯಕ ಉಪನಿರೀಕ್ಷಕರು | ದಿ: 16/07/2026 |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 2012 ರಿಂದ 2015 ರವರೆಗೆ ಚಿತ್ರದುರ್ಗ ನಗರ ಠಾಣೆಯಲ್ಲಿ ಸಹಾಯಕ ಉಪನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತಿದ್ದೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ27.06.2012 ರಂದು ಹಿರಿಯ ಅದಿಕಾರಿಗಳ ನಿರ್ದೇಶನದ ಮೇರೆಗೆ ಐಸಿಐಸಿಐ ಬ್ಯಾಂಕ್ ನಲ್ಲಿ ಚಿನ್ನದ ಸಾಲ ಪಡೆದ ಗ್ರಾಹಕರ ಬಗ್ಗೆ ಮಾಹಿತಿ ಕಲೆಹಾಕುವಂತೆ ನನ್ನನ್ನು ನೇಮಿಸಿದ್ದು ಆ ಸಂಬಂದ ಸದರಿ ಗ್ರಾಹಕರುಗಳ ವಿಳಾಸಗಳ ಗ್ರಾಮಗಳಿಗೆ ಬೇಟಿ ನೀಡಿ ಸದರಿ ಗ್ರಾಹಕರುಗಳ ಗುರುತು ಮತ್ತು ಗುರುತಿನ ಬಗ್ಗೆ ಪೊಟೊಗಳನ್ನು ಗ್ರಾಮಸ್ತರುಗಳಿಗೆ ತೋರಿಸಿ ಅಂತಹ ವ್ಯಕ್ತಿಗಳು ವಾಸ ಇರುವ ಬಗ್ಗೆ ವಿಚಾರಿಸಿದ್ದು ಅಂತಹ ವ್ಯಕ್ತಿಗಳು ಯಾರು ಇಲ್ಲ ಎಂದು ತಿಳಿದು ಬಂದಿದ್ದು ಕಾರಣ ಪತ್ತೆ ಆಗಿಲ್ಲ ದಿಃ30.06.2012 ರಂದು ಹಿರಿಯ ಅದಿಕಾರಿಗಳಿಗೆ ವರದಿ ನೀಡಿದ್ದೆ. ಸದರಿ ವರದಿಯನ್ನು ನಿಪಿ.126 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.126(ಎ) ಎಂದು ಗುರುತಿಲಸಾಯಿತು.

**PW_10**

**<u>ಪಾಟೀ ಸವಾಲು 5 ನೇ ಆರೋಪಿಯ ಪರ ಶ್ರೀಮತಿ ಡಿ ಕೆ ಎಸ್ ವಕೀಲರಿಂದಃ</u>**

2. ನಾನು ಬೇಟಿ ನೀಡಿದ ಗ್ರಾಮಗಳಲ್ಲಿ ಯಾವ ಗ್ರಾಮಸ್ತರನ್ನು ನಾನು ವಿಚಾರಿಸಿದೆ ಆ ಬಗ್ಗೆ ವರದಿಯಲ್ಲಿ ಕಾಣಿಸಿಲ್ಲ. ನಾನು ಗ್ರಾಮಕ್ಕೆ ಮಾಹಿತಿ ಕಲೆಹಾಕಿದ ಸಂಬಂದ ಬೇಟಿ ನೀಡಿದ್ದೆ ಎಂಬ ಬಗ್ಗೆ ಸ್ತಳದ ವಿಡಿಯೋ ಮಾಡಿಲ್ಲ. ಆ ಬಗ್ಗೆ ಯಾವುದೇ ವ್ಯಕ್ತಿಗಳು ಇಲ್ಲ ಎಂಬ ಸಂಬಂದ ಗ್ರಾಮಸ್ತರುಗಳ ಸಮಕ್ಷಮ ಸ್ತಳ ಪಂಚನಾಮೆ ಸಹ ಮಾಡಿಲ್ಲ. ನಾನು ಯಾವುದೇ ಗ್ರಾಮಕ್ಕೆ ಬೇಟಿ ನೀಡಿಲ್ಲ ಯಾವುದೇ ಗ್ರಾಹಕರುಗಳನ್ನು ವಿಚಾರಣೆ ಮಾಡಿಲ್ಲ ನಾನು ಬೇಟಿ ನೀಡಿದ ಗ್ರಾಮದಲ್ಲಿ ಗ್ರಾಹಕರುಗಳು ಇದ್ದು ನಾನು ಸರಿಯಾದ ವಿಚಾರಣೆ ಮಾಡದೇ ಸುಳ್ಳು ವರದಿ ನಿಪಿ.126 ರಂತೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.126 ರಲ್ಲಿ ಕಾಣಿಸಿರುವ 6,7,8,9 ನೇ ವ್ಯಕ್ತಿಗಳೆಂದು ಕಾಣಿಸಿರುವವರು ಐಸಿಐಸಿಐ ಬ್ಯಾಂಕ್ ನ ಗ್ರಾಹಕರುಗಳೆ ಅಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 3 ಮತ್ತು 7 ನೇ ಆರೋಪಿಯ ಪರ ಶ್ರೀಮತಿ ಎಂ ಬಿ ವಕೀಲರಿಂದಃ</u>**

3. ಗ್ರಾಹಕರುಗಳ ಮಾಹಿತಿ ಕಲೆ ಹಾಕುವ ಬಗ್ಗೆ ನನ್ನನ್ನು ನೇಮಿಸಿದ ಬಗ್ಗೆ ಲಿಖಿತ ಆದೇಶ ಇಲ್ಲ ಮೌಖಿಕವಾಗಿ ತಿಳಿಸಿದ್ದಾರೆ. ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಇರುತ್ತದೆ. ನಾನು ಬೇಟಿ ನೀಡಿದ ಗ್ರಾಮದ ಯಾವ ಗ್ರಾಮಸ್ತನನ್ನು ವಿಚಾರಿಸಿದೆ ಎಂಬ ಬಗ್ಗೆ ಯಾವುದೇ ಹೇಳಿಕೆ ಮಾಡಿಲ್ಲ. ಯಾವ ಯಾವ ಗ್ರಾಮಸ್ತರನ್ನು ಗ್ರಾಮದಲ್ಲಿ ವಿಚಾರಿಸಿದ್ದೆ ನಾನು ನನ್ನ ಮೇಲಾದಿರಿಕಾರಿಗಳ ಗಮನಕ್ಕೆ ನೀಡಿಲ್ಲ. ನಾನು ಯಾವುದೇ ಗ್ರಾಮಕ್ಕೆ ಬೇಟಿ ನೀಡಿಲ್ಲ, ಗ್ರಾಮಸ್ತರನ್ನು ವಿಚಾರಣೆ ಮಾಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು1, 2 ಮತ್ತು 4 ನೇ ಆರೋಪಿಗಳ ಪರ ವಕೀಲರು 3,5,7 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀಸವಾಲುನ್ನು ಅಳವಡಿಸಿಕೊಳ್ಳುವಂತೆ</u>**

**<u>ಹೇಳಿದ್ದು ಅಳವಡಿಸಿಕೊಳ್ಳಲಾಗಿದೆ.</u>**

**<u>ಮರುವಿಚಾರಣೆ: ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**